DATE : 17/10/2019
DEPARTMENT / SUBJECT
NAME OF THE NEWS PAPER

# ವಿಧಾನಮಂಡಲ ಪೇಪರ್‌ಲೆಸ್ ಯಾವಾಗ?

## ಇ-ವಿಧಾನ್‌ನತ್ತ ಗಮನ ಹರಿಸದ ಸ್ಪೀಕರ್ ಕಾಗೇರಿ

**ಶಶಿಧರ ಹೆಗಡೆ** ಬೆಂಗಳೂರು

ಸ್ಪೀಕರ್ ಪೀಠದಲ್ಲಿ ಆಸೀನರಾಗುತ್ತಿದ್ದಂತೆ ಮಾಧ್ಯಮ ನಿಯಂತ್ರಣಕ್ಕೆ ಆತುರ ತೋರಿದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಡಿಜಿಟಲ್ ಇಂಡಿಯಾದ ಭಾಗವೇ ಆಗಿರುವ ಇ-ವಿಧಾನ್ ಯೋಜನೆ ಆದ್ಯತೆಯಾಗಿ ಕಾಣದಿರುವುದು ಅಚ್ಚರಿ ಮೂಡಿಸಿದೆ!

ಪಾರ್ಲಿಮೆಂಟ್ ಮಾದರಿಯಲ್ಲಿ ವಿಧಾನಸಭೆ ಅಧಿವೇಶನ ನಡೆಸಬೇಕು. ಸಂಸತ್ ಕಲಾಪದ ವೇಳೆ ಖಾಸಗಿ ವಾಹಿನಿ ವಿಡಿಯೊಗ್ರಾಫರ್‌ಗಳು ಹಾಗೂ ಮುದ್ರಣ ಮಾಧ್ಯಮದ ಛಾಯಾಗ್ರಾಹಕರಿಗೆ ಪ್ರವೇಶವಿರುವುದಿಲ್ಲ. ರಾಜ್ಯದಲ್ಲಿಯೂ ಇದೇ ಮಾದರಿ ಅನುಸರಿಸಲಾಗುವುದು ಎಂಬ ಸಮರ್ಥನೆಯೊಂದಿಗೆ ಕಾಗೇರಿ ಅವರು ವಿಧಾನಸಭೆ ಕಲಾಪದಿಂದ ವಿಡಿಯೊಗ್ರಾಫರ್, ಫೋಟೊಗ್ರಾಫರ್‌ಗಳನ್ನು ದೂರವಿಟ್ಟಿದ್ದಾರೆ. ಆದರೆ, ಕುಂಟುತ್ತ ಸಾಗಿರುವ ಇ-ವಿಧಾನಮಂಡಲ ರಚನೆ ಯೋಜನೆಗೆ ಚುರುಕು ಮುಟ್ಟಿಸಲು ಅಷ್ಟೊಂದು ಆಸಕ್ತಿ ತೋರಿದಂತಿಲ್ಲ.

ರಾಜ್ಯ ವಿಧಾನಮಂಡಲಕ್ಕೆ ಇ-ವಿಧಾನ್ ಸ್ವರೂಪ ನೀಡಿದರೆ ಕೋಟ್ಯಂತರ ರೂ. ಉಳಿಸಬಹುದು. ಟನ್ ಗಟ್ಟಲೆ ಕಾಗದ ನಷ್ಟವಾಗುವುದನ್ನು ತಪ್ಪಿಸಬಹುದು. ಈ ಕಾರಣದಿಂದಲೇ ವಿಧಾನಮಂಡಲ ಪೇಪರ್‌ಲೆಸ್ ಗೊಳಿಸುವುದನ್ನು ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾ ಅಭಿಯಾನದೊಂದಿಗೆ ಜೋಡಿಸಲಾಗಿದೆ. ಇದಕ್ಕೆ 'ಗೋ ಗ್ರೀನ್' ಎಂಬ ಘೋಷವಾಕ್ಯವೂ ಇದೆ. ಈ ಸಂಬಂಧ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯದಿಂದ ಎಲ್ಲ ರಾಜ್ಯಗಳಿಗೂ ಸೂಚನೆ ನೀಡಲಾಗಿದೆ. ಈ ಉದ್ದೇಶಕ್ಕೆ ಹಿಮಾಚಲ ಪ್ರದೇಶ ಅಸೆಂಬ್ಲಿಯನ್ನು ಮಾದರಿಯಾಗಿ ಸ್ವೀಕರಿಸುವಂತೆಯೂ ಸೂಚಿಸಲಾಗಿದೆ. ಏಕೆಂದರೆ, ಹಿಮಾಚಲ ಪ್ರದೇಶದ ವಿಧಾನಮಂಡಲ ಈಗಾಗಲೇ ಕಾಗದರಹಿತವಾಗಿ



ಪರಿವರ್ತಿತಗೊಂಡಿದೆ. ಇದರಿಂದ ಹಿಮಾಚಲ ಪ್ರದೇಶ ವಿಧಾನಮಂಡಲ ವರ್ಷಕ್ಕೆ 45 ಕೋಟಿ ರೂ. ಉಳಿತಾಯ ಮಾಡುತ್ತಿದೆ.

ಕರ್ನಾಟಕ ಸೇರಿದಂತೆ ನಾನಾ ರಾಜ್ಯಗಳಲ್ಲಿ ಇ-ವಿಧಾನ್ ವ್ಯವಸ್ಥೆ ಮಾಡಲು ವಿಳಂಬ ಆಗಿರುವುದನ್ನು ಕೇಂದ್ರ ಸರಕಾರ ಆಕ್ಷೇಪಿಸಿದೆ. ಈ ಬಗ್ಗೆ ಹಲವು ಬಾರಿ ನೆನಪೋಲೆ ಕಳುಹಿಸಿದೆ. ಸಂಸದೀಯ ವ್ಯವಹಾರಗಳ ಸಚಿವಾಲಯವು 'ಒನ್ ನೇಷನ್ ಒನ್ ಅಪ್ಲಿಕೇಷನ್' ಹೆಸರಿನಡಿ ನ್ಯಾಷನಲ್ ಇ-ವಿಧಾನ್ ಅಪ್ಲಿಕೇಷನ್ ಸಿದ್ಧಪಡಿಸಿದೆ. ಇದರ ವೆಬ್‌ಸೈಟ್‌ಗೆ ಕರ್ನಾಟಕವೂ ಸೇರ್ಪಡೆಗೊಂಡಿದೆ. ಆದರೆ, ಪೇಪರ್‌ಲೆಸ್ ವಿಧಾನಮಂಡಲಕ್ಕೆ ರಾಜ್ಯದಲ್ಲಿ ಪೂರ್ಣ ಪ್ರಮಾಣದ ಕ್ರಮ ಕೈಗೊಳ್ಳದ ಹೊರತೂ ಪ್ರಯೋಜನವಾಗುವುದಿಲ್ಲ. ಹಾಗಾಗಿ ಈ ಯೋಜನೆಗೆ ಸಭಾಧ್ಯಕ್ಷರು ಕ್ಷಿಪ್ರಗತಿ ನೀಡುವ ಜರೂರತ್ತು ಇದೆ.

### ಸದ್ಯದ ಪ್ರಗತಿಯೇನು?

- ನ್ಯಾಷನಲ್ ಇ-ವಿಧಾನ್ ಅಪ್ಲಿಕೇಷನ್‌ಗೆ ರಾಜ್ಯ ಸೇರ್ಪಡೆ
- ಈ ಕುರಿತ ವೆಬ್‌ಗೆ ಭೇಟಿ ನೀಡಿ ಕರ್ನಾಟಕದ ಲಿಂಕ್‌ಗೆ ಹೋದರೆ ಕೆಲ ಮಾಹಿತಿ ಲಭ್ಯ
- ವಿಧಾನಸಭೆ ಐಟಿ ವಿಭಾಗದವರು ಸದನದಲ್ಲಿ ನೀಡಿದ ಉತ್ತರದ ಪ್ರತಿಯನ್ನು ಪ್ರಾಯೋಗಿಕವಾಗಿ ಅಪ್‌ಲೋಡ್ ಮಾಡಿದ್ದಾರೆ.
- ಯೋಜನೆ ಅನುಷ್ಠಾನಕ್ಕೆ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ರಚನೆ

### [illegible]

- ಆನ್‌ಲೈನ್‌ನಲ್ಲಿ ಪ್ರಶ್ನೆ ಕೇಳಲು ಸದಸ್ಯರಿಗೆ ತರಬೇತಿ ನೀಡಬೇಕು
- ಸದಸ್ಯರಿಗೆ ಯೂಸರ್ ನೇಮ್, ಪಾಸ್‌ವರ್ಡ್ ನೀಡಬೇಕು
- ನಾನಾ ಇಲಾಖೆಗಳಲ್ಲೂ ನೋಡಲ್ ಅಧಿಕಾರಿ ನೇಮಿಸಬೇಕು
- ಇ-ಆಡಳಿತದ ಮೂಲಕ ನೆಟ್‌ವರ್ಕಿಂಗ್ ವ್ಯವಸ್ಥೆ ಆಗಬೇಕು
- ಕಂಟ್ರೋಲ್ ರೂಂ ಮತ್ತ ಮೂಲಸೌಕರ್ಯದ ಕೂಡಿ ಸಿದ್ಧಗೊಳಿಸಬೇಕು

ವಿಕ ವಿಶೇಷ

**ಸ್ಪೀಕರ್ ಮುಂದಿನ ಟಾಸ್ಕ್:** ಲೋಕಸಭೆ ಸ್ಪೀಕರ್ ಓಂ ಬಿರ್ಲಾ ನೇತೃತ್ವದ ಅಖಿಲ ಭಾರತ ಸ್ಪೀಕರ್‌ಗಳ ಸಮ್ಮೇಳನ ಹಾಗೂ ಉಗಾಂಡಾದಲ್ಲಿ ನಡೆದ ಕಾಮನ್‌ವೆಲ್ತ್ ರಾಷ್ಟ್ರಗಳ ಸ್ಪೀಕರ್‌ಗಳ ಸಮಾವೇಶದಿಂದ ಪ್ರೇರಿತಗೊಂಡ ಕಾಗೇರಿ ಕಲಾಪವನ್ನು ಸುಗಮಗೊಳಿಸಲು ಸುಧಾರಣೆಗೆ ಮುಂದಾಗಿದ್ದರೆ ಬಹುದು. ಅದಕ್ಕೆ ಅವರು ಮೊದಲು ಆಯ್ಕೆ ಮಾಡಿಕೊಂಡಿದ್ದು ಮಾಧ್ಯಮ ನಿರ್ಬಂಧವೆಂಬ ಅಸ್ತ್ರ. ಅದಕ್ಕಿಂತಲೂ ಮುಖ್ಯವಾದದ್ದು ಇ-ವಿಧಾನ್ ಹಾಗೂ ಸದನದಲ್ಲಿ ನಡೆಯುವ ಚರ್ಚೆಯನ್ನು ಅರ್ಥಪೂರ್ಣಗೊಳಿಸುವುದು ಎನ್ನುವುದನ್ನು ಅವರು ಮನಗಾಣುವ ಅವಶ್ಯಕತೆಯಿದೆ.

ಲೋಕಸಭೆ, ರಾಜ್ಯಸಭೆಯಲ್ಲಿ ಸದನದ ಸದಸ್ಯರಿಗೂ ಯಾವುದೇ ವರದಿಯನ್ನು ಕಾಗದದ ರೂಪದಲ್ಲಿ ಕೊಡಲಾಗುವುದಿಲ್ಲ. ಪ್ರಶ್ನೆಗೆ ಸಂಬಂಧಿಸಿದ ಉತ್ತರ, ನಾನಾ ವರದಿಗಳನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ. ನಿರ್ದಿಷ್ಟ ಸದಸ್ಯರು ಬಯಸಿದರೆ ಮಾತ್ರ ಅಂಥವರಿಗೆ ಹಾರ್ಡ್ ಕಾಪಿ ಕೊಡಲಾಗುತ್ತದೆ. ಅದರಲ್ಲೂ ಹತ್ತಾರು, ನೂರಾರು ಪುಟಗಳ ವರದಿಯಿದ್ದರೆ ಸಿ.ಡಿ ಪ್ರತಿ ಕೊಡಲಾಗುತ್ತದೆ. ಈಗ ಸಂಸದರು, ರಾಜ್ಯಸಭೆ ಸದಸ್ಯರು ಆನ್‌ಲೈನ್‌ನಲ್ಲಿ ಪ್ರಶ್ನೆ ಕೇಳುತ್ತಾರೆ. ಇದರಿಂದಲೂ ಕಾಗದ ಉಳಿತಾಯವಾಗುತ್ತದೆ. ಈ ನಿಟ್ಟಿನಲ್ಲಿ ಸ್ಪೀಕರ್ ಕಾಗೇರಿ ಹಾಗೂ ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕಿದೆ.

### ಅನುದಾನದ ಭರವಸೆ ನೀಡಿದ್ದ ಕೇಂದ್ರ

ಇ-ವಿಧಾನ್ ಬಗ್ಗೆ 2017ರ ಮೇ 19ರಂದು ರಾಜ್ಯ ಸರಕಾರಕ್ಕೆ ಪತ್ರ ಬರೆದಿದ್ದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯ ನೆರವು ನೀಡುವ ಭರವಸೆ ಕೊಟ್ಟಿತ್ತು. ಈ ಉದ್ದೇಶಕ್ಕೆ ಮೊದಲ ಹಂತದಲ್ಲಿ 9 ರಾಜ್ಯಗಳನ್ನು ಆಯ್ಕೆ ಮಾಡಿಕೊಂಡಿರುವುದಾಗಿ ಕೇಂದ್ರ ತಿಳಿಸಿತ್ತು. ಆದರೆ, ಈ ಸಂಬಂಧ ಪ್ರಸ್ತಾವನೆ ಕಳುಹಿಸಲು ರಾಜ್ಯ ಸರಕಾರ ವಿಳಂಬ ಮಾಡಿದ್ದರಿಂದ ಅನುದಾನವೇ ಕೈತಪ್ಪಿ ಹೋಗುವಂತಾಗಿದೆ. ನಂತರ ಮತ್ತೊಮ್ಮೆ ವಿನಂತಿಸಿಕೊಂಡಾಗ ಶೇ.60ರಷ್ಟು ನೆರವಿನ ಭರವಸೆ ಕೊಡಲಾಗಿತ್ತು. ಈ ಹಂತದಲ್ಲೂ ತಡ ಮಾಡಿದ್ದರಿಂದ ಕಾಲ ಮಿಂಚಿ ಹೋಗಿದೆ. ಇದಾದ ಬಳಿಕ ನ್ಯಾಷನಲ್ ಇ-ವಿಧಾನ್‌ಗೆ ರಾಜ್ಯ ಸೇರ್ಪಡೆಯಾಗಿದೆ. ಇ-ಆಡಳಿತ ಇಲಾಖೆ ಸಹಕಾರದೊಂದಿಗೆ ಯೋಜನೆ ಜಾರಿಗೆ ಕ್ರಮ ಕೈಗೊಳ್ಳಲಾಗಿದ್ದರೂ ನಿರೀಕ್ಷಿತ ಪ್ರಗತಿಯಾಗಿಲ್ಲ.

ಇ-ವಿಧಾನ್ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಪೀಕರ್ ಅವರೂ ಗಮನ ಹರಿಸುತ್ತಿದ್ದಾರೆ. ನೆಟ್‌ವರ್ಕಿಂಗ್ ವ್ಯವಸ್ಥೆಯಾಗಬೇಕಿದೆ.

**-ಎಂ.ಕೆ.ವಿಶಾಲಾಕ್ಷಿ,** ವಿಧಾನಸಭೆ ಕಾರ್ಯದರ್ಶಿ

ಇ-ವಿಧಾನ್ ರಾಜ್ಯದಲ್ಲಿ ಯಾವತ್ತೋ ಆಗಬೇಕಿತ್ತು. ಅದನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಲು ಬೇಕಾದ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು.

**-ವಿಶ್ವೇಶ್ವರ ಹೆಗಡೆ ಕಾಗೇರಿ,** ಸ್ಪೀಕರ್